

بِسۡمِ اللّٰہِ الرَّحۡمٰنِ الرَّحِیۡمِ

# ಖಿಲಾಫತ್ ಮತ್ತು ವಿಧೇಯತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 24–05–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಖುರ್‌ಆನ್ ವಚನ ತಿಲಾವತ್ ಮಾಡಿದರು:*

إِنَّمَا كَانَ قَوْلَ الْمُؤْمِنِينَ إِذَا دُعُوا إِلَى اللَّهِ وَرَسُولِهِ لِيَحْكُمَ بَيْنَهُمْ أَن يَقُولُوا
سَمِعْنَا وَأَطَعْنَا ۚ وَأُولَٰئِكَ هُمُ الْمُفْلِحُونَ ﴿٥٢﴾
وَمَن يُطِعِ اللَّهَ وَرَسُولَهُ وَيَخْشَ اللَّهَ وَيَتَّقْهِ فَأُولَٰئِكَ هُمُ الْفَائِزُونَ ﴿٥٣﴾
وَأَقْسَمُوا بِاللَّهِ جَهْدَ أَيْمَانِهِمْ لَئِنْ أَمَرْتَهُمْ لَيَخْرُجُنَّ ۖ قُل لَّا تُقْسِمُوا ۖ
طَاعَةٌ مَّعْرُوفَةٌ ۚ إِنَّ اللَّهَ خَبِيرٌ بِمَا تَعْمَلُونَ ﴿٥٤﴾
قُلْ أَطِيعُوا اللَّهَ وَأَطِيعُوا الرَّسُولَ ۖ فَإِن تَوَلَّوْا فَإِنَّمَا عَلَيْهِ مَا حُمِّلَ وَعَلَيْكُم
مَّا حُمِّلْتُمْ ۖ وَإِن تُطِيعُوهُ تَهْتَدُوا ۚ وَمَا عَلَى الرَّسُولِ إِلَّا الْبَلَاغُ الْمُبِينُ ﴿٥٥﴾
وَعَدَ اللَّهُ الَّذِينَ آمَنُوا مِنكُمْ وَعَمِلُوا الصَّالِحَاتِ لَيَسْتَخْلِفَنَّهُمْ فِي الْأَرْضِ
كَمَا اسْتَخْلَفَ الَّذِينَ مِن قَبْلِهِمْ وَلَيُمَكِّنَنَّ لَهُمْ دِينَهُمُ الَّذِي ارْتَضَىٰ لَهُمْ
وَلَيُبَدِّلَنَّهُم مِّن بَعْدِ خَوْفِهِمْ أَمْنًا ۚ يَعْبُدُونَنِي لَا يُشْرِكُونَ بِي شَيْئًا ۚ وَمَن
كَفَرَ بَعْدَ ذَٰلِكَ فَأُولَٰئِكَ هُمُ الْفَاسِقُونَ ﴿٥٦﴾
وَأَقِيمُوا الصَّلَاةَ وَآتُوا الزَّكَاةَ وَأَطِيعُوا الرَّسُولَ لَعَلَّكُمْ تُرْحَمُونَ ﴿٥٧﴾
لَا تَحْسَبَنَّ الَّذِينَ كَفَرُوا مُعْجِزِينَ فِي الْأَرْضِ ۚ وَمَأْوَاهُمُ النَّارُ ۖ وَلَبِئْسَ
الْمَصِيرُ ﴿٥٨﴾

ನಾನು ಪಠಿಸಿದ ವಚನಗಳು ಸೂರತುನ್ನೂರ್‌ನಲ್ಲಿರುವ ವಚನಗಳಾಗಿವೆ. ಅಲ್ಲಾಹನು ಯಾವ ವಚನದಲ್ಲಿ ಸತ್ಯವಿಶ್ವಾಸಿಗಳಿಗೆ ಖಿಲಾಫತ್ ಜಾರಿಗೊಳಿಸುವ ಬಗ್ಗೆ ವಾಗ್ದಾನ ನೀಡಿರುವನೋ ಆ ವಚನದ ಮೊದಲಿರುವ ವಚನಗಳೂ ಅನಂತರದ ವಚನಗಳೂ ಆಗಿವೆ. ಈ ಎಲ್ಲಾ ವಚನಗಳಲ್ಲಿ ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕರನ್ನು ಅನುಸರಿಸುವ ಬಗ್ಗೆ ಮತ್ತು ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಸತ್ಯವಿಶ್ವಾಸಿಗಳ ಗಮನ ಹರಿಸಲಾಗಿದೆ. ಹೀಗೆ ಮಾಡುವುದಾದರೆ ಅಲ್ಲಾಹನು ಖಿಲಾಫತ್ ಎಂಬ ಬಹುಮಾನ ನೀಡುವ ವಾಗ್ದಾನ ಈಡೇರಿಸುವುದಾಗಿ ಹೇಳಿದ್ದಾನೆ. ಅಲ್ಲಾಹನು ಭಯದ ಸ್ಥಿತಿಯನ್ನು ಸುರಕ್ಷತೆ ಮತ್ತು ನೆಮ್ಮದಿಯ ಸ್ಥಿತಿಗೆ ಬದಲಾಯಿಸುವನೆಂದೂ ಶತ್ರುಗಳನ್ನು ಅವರ ದುರ್ಗತಿಗೆ ತಲಪಿಸುವನು ಎಂದೂ ಹೇಳಿರುವನು. ಈ ವಚನಗಳ ಭಾಷಾಂತರ ಹೀಗಿದೆ:

ಸತ್ಯ ವಿಶ್ವಾಸಿಗಳ ಮಧ್ಯೆ ತೀರ್ಮಾನವನ್ನೇನಾದರೂ ಮಾಡಲಿಕ್ಕೋಸ್ಕರ ಅಲ್ಲಾಹನ ಮತ್ತು ಅವನ ಪ್ರವಾದಿಯ ಕಡೆಗೆ ಅವರನ್ನು (ಸತ್ಯ ವಿಶ್ವಾಸಿಗಳನ್ನು) ಆಹ್ವಾನಿಸಿದರೆ ಅವರು, 'ನಾವು ಆಲಿಸಿದೆವು, ನಾವು ವಿಧೇಯರಾಗಿದ್ದೇವೆ' ಎಂದು ಹೇಳುವರು. ಅವರೇ ವಿಜಯಶಾಲಿಗಳು. ಯಾರು ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ವಿಧೇಯರಾಗಿದ್ದುಕೊಂಡು, ಅಲ್ಲಾಹನ ಭಯವಿರಿಸಿ ಕೆಡುಕುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೋ ಅವರೇ ಯಶಸ್ಸುಗಳಿಸುವವರು. ನೀನು ಅವರಿಗೆ ಆಜ್ಞಾಪಿಸಿದರೆ, ಖಂಡಿತವಾಗಿಯೂ ತಾವು ಅದನ್ನು ಕಾರ್ಯಗತಗೊಳಿಸಲಿಕ್ಕೋಸ್ಕರ ಹೊರಡುವೆವೆಂದು ಅಲ್ಲಾಹನಾಣೆ ಹಾಕಿ ಅವರು ದೃಢಪ್ರತಿಜ್ಞೆ ಮಾಡುತ್ತಾರೆ. ಹೇಳು: ನೀವು ಪ್ರತಿಜ್ಞೆ ಮಾಡಬೇಡಿರಿ. ಸಾಮಾನ್ಯವಾದ ವಿಧೇಯತೆಯೇ ಸಾಕು. ನಿಶ್ಚಯವಾಗಿಯೂ ನಿಮ್ಮ ವರ್ತನೆಗಳ ಬಗ್ಗೆ ಅಲ್ಲಾಹನು ಬಲ್ಲವನಾಗಿದ್ದಾನೆ. ಹೇಳು: 'ಅಲ್ಲಾಹನಿಗೆ ವಿಧೇಯರಾಗಿರಿ; ಪ್ರವಾದಿಗೂ ವಿಧೇಯರಾಗಿರಿ.' ಇನ್ನು ನೀವು ವಿಮುಖರಾದರೆ, *ತಿಳಿದುಕೊಳ್ಳಿರಿ* ಅವರ (ಪ್ರವಾದಿಯ) ಹೊಣೆಗಾರಿಕೆ ಮಾತ್ರ ಅವರಿಗಿದೆ. ನಿಮ್ಮ ಹೊಣೆಗಾರಿಕೆ ನಿಮಗೂ ಇದೆ. ನೀವು ಅವರನ್ನು (ಪ್ರವಾದಿಯನ್ನು) ಅನುಸರಿಸಿದರೆ ನೀವು ಸತ್ಪಥವನ್ನು ಪಡೆಯುವಿರಿ. ಸ್ಪಷ್ಟವಾದ ರೀತಿಯಲ್ಲಿ ಸಂದೇಶವನ್ನು ತಲುಪಿಸುವುದು ಹೊರತು ಪ್ರವಾದಿಗೆ ಬೇರೇನೂ ಜವಾಬ್ದಾರಿಕೆ ಇಲ್ಲ. ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ಅವರು ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು. ನಿಮ್ಮ ಮೇಲೆ ಕರುಣೆ ತೋರಿಸಲ್ಪಡಲಿಕ್ಕೋಸ್ಕರ ನೀವು ನಮಾಝನ್ನು ನಿಷ್ಠೆಯಿಂದ ನಿರ್ವಹಿಸಿರಿ, ಝಕಾತ್ ನೀಡಿರಿ ಮತ್ತು ಪ್ರವಾದಿಗೆ ವಿಧೇಯರಾಗಿದ್ದುಕೊಳ್ಳಿರಿ. ಅವಿಶ್ವಾಸಿಗಳು ಭೂಮಿಯಲ್ಲಿ (ನಮ್ಮ ಯೋಜನೆಗಳನ್ನು) ನಿಷ್ಫಲಗೊಳಿಸುವರೆಂದು ನೀನು ಭಾವಿಸಬೇಡ. ಅವರ ವಾಸಸ್ಥಳ ನರಕವಾಗಿದೆ – ಅತಿ ನಿಕೃಷ್ಟವಾದ ನೆಲೆ. (24: 52–58).

ಈ ವಚನಗಳಲ್ಲಿ ಅಲ್ಲಾಹನು ಪ್ರತಿಯೊಂದು ವಿಷಯವನ್ನು ಸ್ಪಷ್ಟವಾಗಿ ವಿಶದೀಕರಿಸಿದ್ದಾನೆ. ನೀವು ಸತ್ಯವಿಶ್ವಾಸಿಗಳಾಗಿದ್ದೀರಿ ಎಂದು ನೀವು ಸಾವಿರ ಸಾರಿ ವಾದಿಸಿದರೂ ನೀವು ಪ್ರತಿಯೊಂದು ಪರೀಕ್ಷೆಯ ಘಟ್ಟಗಳಲ್ಲಿ ಸ್ಥಿರಚಿತ್ತರಾಗಿದ್ದುಕೊಂಡು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಹೃತ್ಪೂರ್ವಕವಾಗಿ ಪರಿಪೂರ್ಣ ದೃಢ ವಿಶ್ವಾಸದೊಂದಿಗೆ ಅನುಷ್ಠಾನಕ್ಕೆ ತರುವವರಾಗುವ ತನಕ ಯಶಸ್ಸನ್ನು ಗಳಿಸಲಾರಿರಿ. ಆದುದರಿಂದ ವಾಸ್ತವಿಕವಾಗಿ ಜಯ ಗಳಿಸಲು ಮತ್ತು ಉದ್ದೇಶಲಕ್ಷ್ಯಗಳನ್ನು ಈಡೇರಿಸುವವರಾಗಲು ಅಲ್ಲಾಹನನ್ನು ಮತ್ತು ಅವನ

ಸಂದೇಶವಾಹಕರನ್ನು ಪರಿಪೂರ್ಣವಾಗಿ ಅನುಸರಿಸುವುದು ಆವಶ್ಯಕವಾಗಿದೆ. ನಾವು ಪರಿಶೋಧಿಸುವುದಾದರೆ ಬಹುತೇಕ ಸಂದರ್ಭಗಳಲ್ಲಿ ನಮಗೆ ಕಾಣಿಸುವುದೇನೆಂದರೆ ಅನುಸರಣೆಯ ಯಾವ ಮಟ್ಟದ ಆವಶ್ಯಕತೆ ಇದೆಯೋ ಅದು ಇರುವುದಿಲ್ಲ. ಖಿಲಾಫತ್‌ನ ಕುರಿತು ವಾಗ್ದಾನ ನೀಡಲಾದ ವಚನಗಳೊಂದಿಗೆಯೇ ಅನುಸರಣೆಯ ಬಗ್ಗೆ ಸಹ ಇಷ್ಟು ಸಾರಿ ಪ್ರಸ್ತಾಪಿಸಲಾಗಿರುವುದರಿಂದ ತಿಳಿದು ಬರುವುದೇನೆಂದರೆ, ಖಿಲಾಫಪತ್ ವ್ಯವಸ್ಥೆ ಸಹ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳ ಮತ್ತು ವ್ಯವಸ್ಥೆಗಳ ಒಂದು ಭಾಗವೇ ಆಗಿದೆ ಎಂದು. ಆದುದರಿಂದ ಖಿಲಾಫತ್‌ನ ನಿರ್ದೇಶಗಳನ್ನು ಪಾಲಿಸುವುದು ಸಹ ಅಲ್ಲಾಹನ ಆಜ್ಞೆಗಳಲ್ಲಿ ಒಂದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ನೇಮಿಸಿದ ಅಮೀರನನ್ನು ಅನುಸರಿಸುವವನು ನನ್ನನ್ನು ಅನುಸರಿಸಿದವನಾಗುತ್ತಾನೆ. ನನ್ನನ್ನು ಅನುಸರಿಸಿದವನು ಅಲ್ಲಾಹನನ್ನು ಅನುಸರಿಸುವವನಾಗುತ್ತಾನೆ. ಆದುದರಿಂದ ಖಲೀಫರನ್ನು ಅನುಸರಿಸುವುದು ಸಾಮಾನ್ಯ ಅಮೀರರನ್ನು ಅನುಸರಿಸುವುದಕ್ಕಿಂತ ಬಹಳ ಹೆಚ್ಚಿನ ಮಟ್ಟದಲ್ಲಿರಬೇಕಾದುದು ಆವಶ್ಯಕವಾಗಿದೆ.

ನನಗೆ ಹೀಗೆ ತಿಳಿದು ಬಂದಿದೆ, ಕೆಲವು ಜಮಾಅತ್‌ಗಳ ಸದರ್‌ಗಳು ತಮ್ಮ ಆಡಳಿತದ ಕಾಲಾವಧಿ ಜೂನ್‌ನಲ್ಲಿ ಕೊನೆಗೊಳ್ಳುವ ಕಾರಣ ಅದರ ಮೊದಲೇ ತಮ್ಮ ಕೆಲಸಗಳನ್ನು ನಿಲ್ಲಿಸಿದ್ದಾರೆ. ಏನು, ಅವರು ಹುದ್ದೆಯಲ್ಲಿ ಸ್ಥಿರವಾಗಿ ಮುಂದುವರಿಯಬೇಕೆಂಬ ಉದ್ದೇಶದಿಂದ ಕೆಲಸ ಮಾಡುತ್ತಿದ್ದರೇ? ಇಂತಹ ಯೋಚನೆ ಧಾರ್ಮಿಕ ಕೆಲಸಗಳಿಗೆ ಸಂಬಂಧಿಸಿ ವಂಚನೆಯಾಗುತ್ತದೆ. ಇದು ವಿದ್ರೋಹಕರ ಯೋಚನೆಯಾಗಿದೆ. ಇದು ತಮ್ಮನ್ನು ಖಿಲಾಫತ್ತಿನ ವಲಯದಿಂದ ಹೊರಗೆ ತರುವ ವಿಷಯವಾಗಿದೆ. ಯಾಕೆಂದರೆ ಈಗ ಸದರ್‌ಗಳ ಅಧಿಕಾರದ ಕಾಲಾವಧಿ ಆರು ವರ್ಷ ಮಾತ್ರವಾಗಿರುವುದು ಎಂಬ ನಿಯಮಕ್ಕೆ ಖಲೀಫರು ಮಂಜೂರಾತಿ ನೀಡಿದರು. ಆದುದರಿಂದ ನಾವು ಮನಸ್ಸುಗೊಟ್ಟು ಕೆಲಸ ಮಾಡಲಾರೆವು ಎಂದು ಅವರು ಭಾವಿಸುತ್ತಾರೆ. ಇಂತಹ ಜನರು ತಖ್ವದಿಂದ ವರ್ತಿಸಬೇಕು. ಅಲ್ಲಾಹನಿಗೆ ಭಯಪಡಬೇಕಾಗಿದೆ. ಹಝ್ರತ್ ನಬಿ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಮ್ಮೆ ಹೀಗೆ ಪ್ರತಿಜ್ಞೆ ಮಾಡಿಸಿ ಬೈಅತ್ ಪಡೆದಿದ್ದರು: 'ನಾವು ಆಲಿಸಿದ ಕೂಡಲೆ ಅನುಸರಿಸುವೆವು ನಮಗೆ ಅದು ಇಷ್ಟಕರವಾಗಿದ್ದರೂ ಇಷ್ಟಕರವಾಗಿಲ್ಲವಾದರೂ'. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಸಹ ಹೇಳಿದ್ದರು: ಯಾರು ಅಲ್ಲಾಹನನ್ನು ಅನುಸರಿಸುವುದರಿಂದ ತನ್ನ ಕೈಯ್ಯನ್ನು ಹಿಂತೆಗೆದು ಕೊಂಡಿರುವನೋ ಅವನು ಖಿಯಾಮತ್ ದಿನ ಅಲ್ಲಾಹನನ್ನು ಭೇಟಿಯಾಗುವಾಗ ಅವನ ಬಳಿ ಯಾವ ಸಾಕ್ಷ್ಯಾಧಾರವಾಗಲಿ, ನೆವನವಾಗಲಿ ತನ್ನ ವರ್ತನೆ ಬಗ್ಗೆ ಇರಲಾರದು. ತನ್ನ ಕಾಲಘಟ್ಟದ ಇಮಾಮರನ್ನು ಬೈಅತ್ ಮಾಡದೆ ಮೃತನಾದವನು ಅಜ್ಞಾನ ಕಾಲದ ಪಥಭ್ರಷ್ಟತೆಯ ಕಾಲದ ಮೃತ್ಯುವನ್ನು ಹೊಂದಿದವನಾಗಿದ್ದಾನೆ.

ನಾವು ಈ ಕಾಲಘಟ್ಟದ ಇಮಾಮರನ್ನು ಬೈಅತ್ ಮಾಡಿದ ಭಾಗ್ಯಶಾಲಿಗಳಾಗಿದ್ದೇವೆ. ಆದುದರಿಂದ ನಾವು ಅಜ್ಞಾನಿಗಳೊಂದಿಗೆ ಸೇರಿದವರಲ್ಲ. ಆದರೆ ಅವರನ್ನು ನಂಬಿದ ನಂತರ ನಮ್ಮ ಕರ್ಮಗಳು ಅಜ್ಞಾನದ ಕಾಲದವುಗಳಾದರೆ ನಾವು ಸ್ವತಃ ನಮ್ಮನ್ನು ನಮ್ಮ ಕೃತ್ಯಗಳ ಮೂಲಕ ಈ ಬೈಅತ್‌ನಿಂದ ಹೊರಗೆ ತರುವಂತವರಾಗುವೆವು. ನಾವು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಅನುಸರಣೆಯಿಂದ ಹೊರಗೆ ಹೋದವರಾಗುವೆವು. ಆದುದರಿಂದ ಬೈಅತ್ ನಂತರ ನಮ್ಮ ಯೋಚನೆಗಳನ್ನು ಸರಿಯಾಗಿರಿಸುವುದು ಮತ್ತು ಪರಿಪೂರ್ಣ ಅನುಸರಣೆಯ ಉದಾಹರಣೆ ತೋರಿಸುವುದು ಅತ್ಯಂತ ಅವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಪ್ರತಿಯೊಂದು ಆಜ್ಞೆಯನ್ನು ಸತ್ಯವಾದ ಹೃದಯದೊಂದಿಗೆ ಅನುಸರಿಸಿರಿ. ಆ ಮೂಲಕ ಅಲ್ಲಾಹನು ಸಂಪ್ರೀತನಾಗಲಿ. ನೀವು ಮೊದಲಿನ ಹಾಗೆ ಅಲ್ಲ ಎಂದು ಬೈಅತ್ ಮಾಡಿದ ನಂತರ ಶತ್ರು ಸಹ ತಿಳಿದುಕೊಳ್ಳುವವನಾಗಲಿ. ಮೊಕದ್ದಮೆಗಳಲ್ಲಿ ಸತ್ಯವಾದ ಸಾಕ್ಷ್ಯ ನೀಡಿರಿ. ಈ ಜಮಾಅತ್‌ಗೆ ಪ್ರವೇಶಿಸುವವರು ಪೂರ್ಣ ಧೈರ್ಯದಿಂದ ಮತ್ತು ಪೂರ್ಣ ಮನಸಿನೊಂದಿಗೆ ಸತ್ಯಕ್ಕೆ ಬದ್ಧನಾಗಿರಬೇಕು.

ಮೇಲೆ ಉಲ್ಲೇಖಿಸಿದ ವಚನಗಳಲ್ಲಿ ಅಲ್ಲಾಹನು ಹೇಳುತ್ತಾನೆ: ಈ ಜನರು ಬಹಳ ಸಾರಿ ಆಣೆ ಹಾಕಿ ಹೇಳುತ್ತಾರೆ, ನೀವು ಆಜ್ಞಾಪಿಸಿದರೆ ನಾವು ಹಾಗೆ ಮಾಡುವೆವು ಹೀಗೆ ಮಾಡುವೆವು ಎಂದು. ಆದರೆ ಆಜ್ಞೆ ನೀಡಿದಾಗ ಪೂರ್ಣವಾಗಿ ಅನುಸರಿಸುವುದಿಲ್ಲ. ಇದೇ ಕಾರಣದಿಂದ ಅಲ್ಲಾಹನು ಹೇಳುತ್ತಾನೆ: ನೀವು ಹೆಚ್ಚು ಆಣೆಗಳನ್ನು ಹಾಕಬೇಡಿರಿ. ದೊಡ್ಡ ದೊಡ್ಡ ವಾಗ್ದಾನಗಳನ್ನು ಮಾಡಬೇಡಿರಿ. ನೀವು ಮಅ್‌ರೂಫ್ ಅನುಸರಣೆ, ಎಂದರೆ ಅನುಸರಣೆ ಎಂದರೆ ಏನೆಂದು ಸಾಮಾನ್ಯವಾಗಿ ಅರ್ಥ ಮಾಡಿಕೊಳ್ಳುವ ಹಾಗೆ ಅನುಸರಣೆ ತೋರಿಸಿರಿ. ಹಾಗೆ ಮಾಡಿದರೆ ನೀವು ಅನುಸರಿಸಿದೆವು ಎಂದು ನಾವು ತಿಳಿದುಕೊಳ್ಳುವೆವು. ಹಾಗೆ ಮಾಡದಿದ್ದರೆ ನೀವು ಕೇವಲ ಬಾಯಿ ಮಾತಿನಲ್ಲಿ ಹೇಳುತ್ತಿರುವಿರಿ. ಅಲ್ಲಾಹನು ನಿಮ್ಮ ಕರ್ಮಗಳ ಬಗ್ಗೆ ತಿಳಿದಿದ್ದಾನೆ. ನಿಮ್ಮ ಹೃದಯಗಳ ಸ್ಥಿತಿಯನ್ನು ಸಹ ಅರಿತದವನಾಗಿದ್ದಾನೆ. ಅನುಸರಣೆ ಎಂದರೆ ಅಲ್ಲಾಹನಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸಬೇಕು ಮತ್ತು ಅವನ ಆರಾಧನೆಯನ್ನು ಸಮಾಧಾನದಿಂದ ಮಾಡಬೇಕು. ಆದುದರಿಂದ ಈ ರಮಝಾನಿನಲ್ಲಿ ಉಂಟಾಗಿರುವ ಶ್ರದ್ಧೆಯನ್ನು ಜಾರಿಯಲ್ಲಿರಿಸಿರಿ. ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾ ಅವನ ದಾಸರ ಹಕ್ಕುಗಳನ್ನು ಸಹ ಈಡೇರಿಸಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ್ದಾರೆ: ಪ್ರತಿಯೊಂದು ರೀತಿಯ ಪಿತೂರಿಯಿಂದ ರಕ್ಷಿಸಿಕೊಳ್ಳಿರಿ. ಪ್ರತಿಯೊಂದು ರೀತಿಯ ಕೆಟ್ಟ ವರ್ತನೆ, ಜಗಳ, ಕಲಹಗಳಿಂದ ದೂರ ಸರಿಯಿರಿ. ನಿಮ್ಮ ಸ್ವಭಾವಗುಣಗಳನ್ನು ಉತ್ತಮ ಗೊಳಿಸಿರಿ. ಎಂತಹ ಶ್ರೇಷ್ಠ ಸ್ವಭಾವಗುಣಗಳನ್ನು ಹೊಂದಬೇಕೆಂದರೆ ಅಹ್ಮದಿ ಮತ್ತು ಅಹ್ಮದಿಯೇತರನ ಮಧ್ಯೆ ವ್ಯತ್ಯಾಸ ಚೆನ್ನಾಗಿ ಸ್ಪಷ್ಟವಾಗಿ ಕಾಣಿಸುವಂತಾಗಲಿ. ಸತ್ಯದಲ್ಲಿ ಯಾವಾಗಲೂ ಸ್ಥಿರಚಿತ್ತರಾಗಿರಿ. ಒಟ್ಟಾರೆ ಹೇಳುವುದಾದರೆ ಪ್ರತಿಯೊಂದು ರೀತಿಯ ಎಲ್ಲಾ ಒಳಿತುಗಳನ್ನು ಮಾಡುವುದು ಆವಶ್ಯಕವಾಗಿದೆ. ಇದುವೇ ಮಅ್‌ರೂಫ್ ಅನುಸರಣೆಯಾಗಿದೆ. ಇದರ ಬಗ್ಗೆಯೇ ಅಲ್ಲಾಹನು ಆಜ್ಞೆ ನೀಡಿದ್ದಾನೆ. ಇದರ

ಬಗ್ಗೆಯೇ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಜ್ಞಾಪಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ಇದೇ ಇಚ್ಛೆಯನ್ನು ಪ್ರಕಟಿಸಿದ್ದಾರೆ ಮತ್ತು ಆಜ್ಞೆ ನೀಡಿದ್ದಾರೆ. ಅಹ್ಮದಿಯಾ ಖಿಲಾಫತ್ ಸಹ ಕಳೆದ 111ವರ್ಷಗಳಿಂದ ಇದನ್ನೇ ಮಾಡಲು ಜನರ ಗಮನ ಹರಿಸುತ್ತಿದೆ. ನೀವು ಈ ವಿಷಯವನ್ನು ಯಾವಾಗಲೂ ನೆನಪಿನಲ್ಲಿರಿಸಬೇಕು. ಅಲ್ಲಾಹನು ಮತ್ತು ಅವನ ಸಂದೇಶವಾಹಕರನ್ನು ಅನುಸರಿಸಿ ಶರೀಅತ್ ಮತ್ತು ಸುನ್ನತ್‌ಗೆ ಅನುಸಾರವಾಗಿಯೇ ಅಹ್ಮದಿಯಾ ಖಿಲಾಫತ್ ಆಜ್ಞೆಗಳನ್ನು ನೀಡುತ್ತಿದೆ ಮತ್ತು ಮುಂದೆ ಸಹ ಆಜ್ಞೆಗಳನ್ನು ನೀಡುತ್ತಿರುವುದು. ಅಲ್ಲಾಹನು ಹೇಳಿದ್ದಾನೆ: ನೀವು ಅನುಸರಣೆ ದೋರುವವರಾದರೆ ಸತ್ಪಥ ಗಳಿಸುವಿರಿ ಎಂದು. ಅದರಿಂದ ದೂರ ಸರಿದು ರಕ್ಷಣೆ ಪಡೆಯುವ ಬೇರೆ ಮಾರ್ಗ ಇಲ್ಲ.

ಖಿಲಾಫತ್ ಎಂಬ ಅನುಗ್ರಹದಿಂದ ಪಾಲು ಪಡೆಯಲಿಕ್ಕೋಸ್ಕರ ಆರಾಧನೆಗಳನ್ನು ಸಂರಕ್ಷಿಸುವುದು ಆವಶ್ಯಕವಾಗಿದೆ. ಅದರೊಂದಿಗೆ ಲೌಕಿಕ ಅಭಿಲಾಷೆಗಳೆಂಬ ಶಿರ್ಕ್‌ನಿಂದಲೂ ರಕ್ಷಿಸಿಕೊಳ್ಳುವುದು ಸಹ ಆವಶ್ಯಕವಾಗಿದೆ. ಆಯಾಕಾಲದ ಖಲೀಫರನ್ನು ಪರಿಪೂರ್ಣವಾಗಿ ಅನುಸರಿಸುವುದು ಆವಶ್ಯಕವಾಗಿದೆ. ಹಾಗೆ ಮಾಡದಿದ್ದರೆ ಅನುಸರಣೆ ದೋರದವರಲ್ಲಿ ಸೇರುವವರಾಗುವರು. ಹಾಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದಂತೆ ಅಂತಹ ಜನರು ಬೈಅತ್‌ನಿಂದ ದೂರ ಸರಿಯುವರು. ಆದುದರಿಂದ ಅಲ್ಲಾಹನ ಕಾರುಣ್ಯವನ್ನು ಗಳಿಸಲು ನಮ್ಮ ಸ್ಥಿತಿಗಳನ್ನು ಸುಧಾರಣೆ ಮಾಡುವುದು ಆವಶ್ಯಕವಾಗಿದೆ. ಅಲ್ಲಾಹನ ಕಾರುಣ್ಯ ನಮ್ಮನ್ನು ತನ್ನ ರಹ್ಮಾನಿಯ್ಯತ್ ಮತ್ತು ರಹೀಮಿಯ್ಯತ್‌ನ ಚಾದರದೊಳಗೆ ಎಳೆದುಕೊಳ್ಳುವಾಗ ಶತ್ರುಗಳ ಪ್ರತಿಯೊಂದು ಕುತಂತ್ರ ಅವರ ಮೇಲೆಯೇ ಮರಳಿಸಲ್ಪಡುವುದು. ಅವರು ಇನ್‌ಶಾಅಲ್ಲಾಹ್ ತಮ್ಮ ಅತ್ಯಂತ ದುರ್ಗತಿಗೆ ತಲಪುವರು.

ಈಗ ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾರು ನಿಧನ ಹೊಂದಿದ ಸಂದರ್ಭದಲ್ಲಿ ಜಮಾಅತ್ ಹೊಂದಿದ್ದ ಆತಂಕ ಭರಿತ ಸ್ಥಿತಿ ಮತ್ತು ಖಿಲಾಫತ್‌ನಿಂದ ಜಮಾಅತ್‌ಗೆ ಲಭಿಸಿದ ನೆಮ್ಮದಿಯ ಬಗ್ಗೆ ನೀಡಿದ ವಿವರಣೆಯನ್ನು ನಿಮ್ಮ ಮುಂದೆ ಇರಿಸುತ್ತೇನೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ಜಮಾಅತಿನ ಜನರ ಸ್ಥಿತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದುವಾಗ ಸಹಾಬರ ಸ್ಥಿತಿ ಹೇಗಿತ್ತೋ ಹಾಗೆಯೇ ಇತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈಗ ಮೃತರಾಗಲಾರರು ಎಂದು ನಾವೆಲ್ಲರೂ ಭಾವಿಸಿದ್ದೆವು. ಅದರ ಪರಿಣಾಮವಾಗಿ ನಾವು ಒಂದು ನಿಮಿಷ ಕಾಲವೂ ಹೀಗೆ ಯೋಚಿಸಿರಲಿಲ್ಲ– ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ಏನು ಆಗಬಹುದು ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮ್ಮ ಮುಂದೆಯೇ ಎಂದೂ ಮೃತರಾಗಲಾರರು ಎಂದು ನಾವು ಭಾವಿಸಿದ್ದುದರಿಂದ ಅವರು ನಿಜವಾಗಿಯೂ ಮೃತರಾದಾಗ ಅವರು ಮೃತರಾದರೆಂದು ನಂಬುವುದೇ ನಮಗೆ ಬಹಳ ಕಷ್ಟಕರವಾಗಿತ್ತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೃತ ಶರೀರವನ್ನು ಲಾಹೋರಿನಿಂದ ಖಾದಿಯಾನಿಗೆ ತಂದಾಗ ಅದನ್ನು ತೋಟದೊಳಗಿನ ಒಂದು ಮನೆಯಲ್ಲಿರಿಸಲಾಯಿತು. ಅಂದಾಜು ಎಂಟು–ಒಂಬತ್ತು ಗಂಟೆಯ ಸಮಯದಲ್ಲಿ ಖ್ವಾಜಾ ಕಮಾಲುದ್ದೀನ್ ಸಾಹಿಬ್ ತೋಟಕ್ಕೆ ಬಂದರು. ನನ್ನನ್ನು ದೂರ ಕರೆದುಕೊಂಡು ಹೋಗಿ ಹೇಳಿದರು: ಮಿಯಾಂ, ಹಝ್ರತ್ ಸಾಹಿಬರು ನಿಧನ ಹೊಂದಿದ ನಂತರ ಏನಾಗಬಹುದು ಎಂದು ಏನಾದರೂ ಯೋಚನೆ ಮಾಡಿರುವಿಯಾ? ನಾನು ಹೇಳಿದೆ: ಏನಾದರೂ ಆಗಬಹುದಾಗಿದೆ, ಆದರೆ ಏನಾಗಬೇಕು ಎಂಬುದರ ಬಗ್ಗೆ ನಾನು ಏನನ್ನೂ ಹೇಳಲಾರೆ. ಖ್ವಾಜಾ ಸಾಹಿಬರು ಹೇಳಿದರು: ನನ್ನ ಅಭಿಪ್ರಾಯದ ಪ್ರಕಾರ ನಾವೆಲ್ಲರೂ ಹಝ್ರತ್ ಮೌಲವಿ ಸಾಹಿಬ್ (ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು) ಅವರನ್ನು ಬೈಅತ್ ಮಾಡಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಆಗ ನನ್ನ ಪ್ರಾಯ ಕಡಿಮೆ ಆಗಿದ್ದ ಕಾರಣದಿಂದಲೂ ನನ್ನ ಓದು ಕಡಿಮೆಯಾಗಿದ್ದ ಕಾರಣದಿಂದಲೂ ನಾನು ಹೇಳಿದೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ನಿಧನ ಹೊಂದಿದ ನಂತರ ಬೇರೊಬ್ಬರನ್ನು ಬೈಅತ್ ಮಾಡಬೇಕೆಂದು ಎಲ್ಲಿಯೂ ಬರೆದಿಲ್ಲ. ಆದುದರಿಂದ ನಾವು ಹಝ್ರತ್ ಮೌಲವಿ ಸಾಹಿಬರನ್ನು ಬೈಅತ್ ಮಾಡುವುದು ಏಕೆ? ಎಂದು ಕೇಳಿದೆ. ಅಲ್‌ವಸಿಯ್ಯತ್ ಗ್ರಂಥದಲ್ಲಿ ಅದರ ಬಗ್ಗೆ ಬರೆಯಲಾಗಿದ್ದರೂ ಆಗ ನನಗೆ ಆ ವಿಷಯ ಹೊಳೆಯಲೇ ಇಲ್ಲ. ಅನಂತರ ಖ್ವಾಜಾ ಸಾಹಿಬರು ಹೇಳಿದರು: ಮೌಲವಿ ಮುಹಮ್ಮದ್ ಅಲಿ ಸಾಹಿಬರ ಅಭಿಪ್ರಾಯ ಸಹ ಇದೇ ಆಗಿದೆ. ಅವರು ಹೇಳುತ್ತಾರೆ ಜಮಾಅತಿನ ಎಲ್ಲರೂ ಮೌಲವಿ ಸಾಹಿಬರನ್ನು ಬೈಅತ್ ಮಾಡಬೇಕು ಎಂದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಕೊನೆಗೆ ಜಮಾಅತಿನ ಎಲ್ಲರೂ ಐಕ್ಯದಿಂದ ಹಝ್ರತ್ ಮೌಲವಿ ಸಾಹಿಬರೊಂದಿಗೆ ಕೋರಿದರು: ತಾವು ಬೈಅತ್ ಸ್ವೀಕರಿಸಿರಿ ಎಂದು. ತೋಟದಲ್ಲಿ ಜಮಾಅತಿನ ಎಲ್ಲರೂ ಜಮಾಯಿಸಿದಾಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಒಂದು ಭಾಷಣ ಮಾಡಿ ಹೇಳಿದರು: ನನಗೆ ಇಮಾಮತ್ ಪದವಿ ಗಳಿಸುವ ಯಾವ ಆಶೆಯೂ ಇಲ್ಲ. ಬೇರೆ ಯಾರಾದರೂ ಒಬ್ಬರನ್ನು ಬೈಅತ್ ಮಾಡಿರಿ. ಆಗ ನಾವೆಲ್ಲರೂ ಒಗ್ಗಟ್ಟಿನಿಂದ, ಖಿಲಾಫತ್ ಪದವಿಗೆ ತಾವೇ ಅರ್ಹರಾಗಿರುವಿರಿ ಎಂದು ಹೇಳಿದೆವು. ಹಾಗೆ ನಾವೆಲ್ಲರೂ ಅವರನ್ನು ಬೈಅತ್ ಮಾಡಿದೆವು.

ಕೆಲವು ವರದಿಗಳ ಪ್ರಕಾರ ಖ್ವಾಜಾ ಸಾಹಿಬರು, ಅಲ್‌ವಸಿಯ್ಯತ್ ಪ್ರಕಾರ ನಾವು ಒಬ್ಬ ಖಲೀಫರನ್ನು ಚುನಾಯಿಸಿ ಅವರಿಗೆ ಅನುಸರಣೆ ದೋರುವುದು ಆವಶ್ಯಕವಾಗಿತ್ತು. ಆದುದರಿಂದ ನಾವು ಖಲೀಫತುಲ್ ಮಸೀಹ್ ಅವ್ವಲ್‌ರ ಹೆಸರನ್ನು ಸೂಚಿಸಿದೆವು ಎಂದು ಪ್ರಕಟಿಸಿದ್ದರು. ಖ್ವಾಜಾ ಸಾಹಿಬ್ ಮೊದಲಾದವರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರನ್ನು ಬೈಅತ್ ಮಾಡಿದ್ದರೂ ಅವರ ಹೃದಯಗಳಲ್ಲಿ ಖಿಲಾಫತನ್ನು ಅನುಸರಿಸುವ ಸತ್ಯವಾದ ಅಭಿಲಾಷೆ ಇರಲಿಲ್ಲ.

ಆದುದರಿಂದ ಅವರು ಖಿಲಾಫತ್‌ನ ಮೇಲೆ ಅಂಜುಮನ್‌ಗೆ ಅಧಿಕಾರವಿದೆ ಎಂದು ಹೇಗೆ ಸ್ಥಾಪಿಸಬಹುದೆಂಬ ಚಿಂತೆಯಲ್ಲಿದ್ದರು. ಅಂಜುಮನ್ ಮೂಲಕ ಎಲ್ಲಾ ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳಲು ಅವರು ಬಯಸಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಖಿಲಾಫತ್‌ಗೆ ಬೈಅತ್ ಮಾಡಿದ ನಂತರ ಹದಿನೈದು ಇಪ್ಪತ್ತು ದಿವಸಗಳು ಮಾತ್ರ ದಾಟಿ ಹೋದಾಗ ಒಂದು ದಿನ ಮೌಲವಿ ಮುಹಮ್ಮದ್ ಅಲಿ ಸಾಹಿಬ್ ನನ್ನನ್ನು ಭೇಟಿಯಾಗಿ ಹೇಳಿದರು: ನಮ್ಮ ಜಮಾಅತಿನ ನಿಝಾಮ್ ಹೇಗಿರಬೇಕೆಂದು ನೀವು ಯೋಚಿಸಿರುವಿರಾ? ಎಂದು ಕೇಳಿದರು. ಆಗ ನಾನು ಹೇಳಿದೆ: ಈಗ ಅದರ ಬಗ್ಗೆ ಚಿಂತಿಸಲಿಕ್ಕೆ ಏನಿದೆ? ನಾವು ಹಝ್ರತ್ ಮೌಲವಿ ಸಾಹಿಬರನ್ನು ಬೈಅತ್ ಮಾಡಿದ್ದೇವೆ. ಮೌಲವಿ ಮುಹಮ್ಮದ್ ಅಲಿ ಸಾಹಿಬರು ಹೇಳಿದರು: ಅದು ಪೀರ್ ಮತ್ತು ಮುರೀದ್‌ಗೆ ಸಂಬಂಧಿಸಿದ ವಿಷಯವಾಗಿದೆ. ಈ ಜಮಾಅತಿನ ನಿಝಾಮ್ ಹೇಗೆ ಚಲಾಯಿಸಬೇಕು ಎಂಬುದು ಈಗ ಇರುವ ಪ್ರಶ್ನೆಯಾಗಿದೆ. ನಾನು ಹೇಳಿದೆ: ನನ್ನ ಅಭಿಪ್ರಾಯದಲ್ಲಿ ಈ ಪ್ರಶ್ನೆಯ ಬಗ್ಗೆ ಈಗ ಚಿಂತಿಸುವ ಆವಶ್ಯಕತೆಯೇ ಇಲ್ಲ. ನಾವು ಒಬ್ಬರನ್ನು ಬೈಅತ್ ಮಾಡಿದ್ದೇವೆ. ಅವರು ಈ ವಿಷಯವನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳುವವರಾಗಿದ್ದಾರೆ. ಜಮಾಅತಿನ ನಿಝಾಮ್ ಹೇಗೆ ಚಲಾಯಿಸಬೇಕು ಎಂದು ಅವರು ಮನವರಿಕೆ ಮಾಡಿಕೊಳ್ಳುವರು. ನಾವು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವ ಆವಶ್ಯಕತೆ ಏನಿದೆ. ಆಗ ಮೌಲವಿ ಮುಹಮ್ಮದ್ ಅಲಿ ಮೌನವಾದರು. ಆದರೆ, ಇದು ಚಿಂತಾರ್ಹವಾದ ವಿಷಯವಾಗಿದೆ ಎಂದು ಹೇಳಿದರು. ಆ ಜನರಿಗೆ ಸಮಾಧಾನವಿರಲಿಲ್ಲ. ಅವರ ಆಂತರಿಕ ಸ್ಥಿತಿಯ ಬಗ್ಗೆ ಇದರಿಂದ ತಿಳಿಯುತ್ತದೆ. ಆ ಜನರು ಖಲೀಫತುಲ್ ಮಸೀಹ್ ಅವ್ವಲ್‌ರನ್ನು ಯಾವುದೋ ಸ್ವಾರ್ಥ ಉದ್ದೇಶದಿಂದ ಬೈಅತ್ ಮಾಡಿದ್ದರು. ಹೃತ್ಪೂರ್ವಕವಾಗಿ ಬೈಅತ್ ಮಾಡಿರಲಿಲ್ಲ. ಆದುದರಿಂದ ಅವರಿಗೆ ಮಾನಸಿಕ ಶಾಂತಿ ಲಭಿಸಿರಲಿಲ್ಲ. ಅವರು ಪರಿಪೂರ್ಣ ಅನುಸರಣೆಯೊಳಗಿರಲು ಇಚ್ಛಿಸಿರಲಿಲ್ಲ. ಅವರು ಈ ಆಧ್ಯಾತ್ಮಿಕ ನಿಝಾಮನ್ನು ಲೌಕಿಕ ನಿಝಾಮ್‌ಗಳ ಹಾಗೆ ಚಲಾಯಿಸಲು ಇಚ್ಛಿಸಿದ್ದರು. ಅದರ ಪರಿಣಾಮ ಸಹ ನೋಡಿದೆವು. ಈ ಜನರು ಈಗ ಹೆಸರಿಗೆ ಮಾತ್ರ ಇದ್ದಾರೆ. ಅವರು ಸ್ವತಃ ನಿರ್ಮಿಸಿದ ನಿಝಾಮ್‌ನೊಂದಿಗಿದ್ದಾರೆ. ಆದರೆ ಖಿಲಾಫತಿನ ನೆರಳಿನಡಿಯಲ್ಲಿರುವ ಜಮಾಅತ್ ಅಲ್ಲಾಹನ ಅನುಗ್ರಹದಿಂದ 212 ದೇಶಗಳಲ್ಲಿ ಸ್ಥಾಪಿತವಾಗಿದೆ. ಅಲ್ಲಾಹನು ಖಿಲಾಫತ್‌ನೊಂದಿಗೆ ಸಂಬಂಧಿಸಿದ ಜಮಾಅತಿಗೆ ಅಭಿವೃದ್ಧಿ ನೀಡುತ್ತಿದ್ದಾನೆ. ಜಮಾಅತ್‌ಗಳು ವಿಶಾಲವಾಗಿ ಹರಡುತ್ತಿವೆ. ದೂರ ದೇಶದಲ್ಲಿರುವವರು ಸಹ ಖಿಲಾಫತ್‌ನೊಂದಿಗೆ ನಿಷ್ಠೆಯಿಂದ ಇದ್ದಾರೆ. ಅವರ ನಿಷ್ಠೆ ವರ್ಧಿಸುತ್ತಾ ಇದೆ. ಖಿಲಾಫತ್ ಮತ್ತು ಅದರೊಂದಿಗೆ ಜೋಡಿಸಿರುವ ಜಮಾಅತ್‌ಗೆ ಅಲ್ಲಾಹನು ಮಾರ್ಗದರ್ಶನ ಸಹ ನೀಡುತ್ತಾನೆ. ಈ ಖಿಲಾಫತ್ ಕಡೆಗೆ ಜನರನ್ನು ತರುತ್ತಿದ್ದಾನೆ.

ಕಳೆದ ವಾರದ ಖುತ್‌ಬದಲ್ಲಿ ನಾನು ಒಂದು ವಿಷಯ ಹೇಳಲು ಮರೆತಿದ್ದೆ. ಈ ಮಸ್‌ಜಿದ್‌ಗೆ ಅಸ್ತಿಭಾರ ಹಾಕುವಾಗ ನಾನು ಕೆನಡದ ಪ್ರವಾಸದಲ್ಲಿದ್ದೆ. ಆದರೆ ಅಸ್ತಿಭಾರ ಹಾಕುವ ಇಟ್ಟಿಗೆಯ ಮೇಲೆ ನಾನು ದುಆ ಮಾಡಿದ್ದೆ. ಈ ಮಸ್‌ಜಿದ್‌ಗೆ ಅಸ್ತಿಭಾರ 2016 ಅಕ್ಟೋಬರ್ ದಿನಾಂಕ 10ರಂದು ಹಾಕಲಾಗಿತ್ತು. ಮುಕರ್ರಮ್ ಉಸ್ಮಾನ್ ಚೀನೀ ಸಾಹಿಬ್ (ಮರ್‌ಹೂಮ್) ಅಸ್ತಿಭಾರ ಹಾಕಿದ್ದರು. ಆದುದರಿಂದ ಅಲ್ಲಾಹನ ಅನುಗ್ರಹದಿಂದ ಚೀನೀ ಜನಾಂಗ ಸಹ ಇದರಲ್ಲಿ ಭಾಗವಹಿಸಿದೆ ಎಂದು ಹೇಳಬಹುದಾಗಿದೆ. ಚೈನಾದಲ್ಲಿ ಸಹ ಇಸ್ಲಾಮ್ ಬೇಗನೆ ಹಬ್ಬಿಸಲು ನಮಗೆ ಅಲ್ಲಾಹನು ಭಾಗ್ಯ ನೀಡಲಿ ಎಂದು ಪ್ರಾರ್ಥಿಸಿರಿ. ಮುಕರ್ರಮ್ ಉಸ್ಮಾನ್ ಚೀನೀ ಸಾಹಿಬ್ ಬಹಳ ಆಶಿಸುತ್ತಿದ್ದರು ಮತ್ತು ಯಾವಾಗಲೂ ಚಿಂತಿಸುತ್ತಿದ್ದರು– ಚೈನಾ ದೇಶದಲ್ಲಿ ಅಹ್ಮದಿಯ್ಯತ್ ಮತ್ತು ಇಸ್ಲಾಮಿನ ನೈಜ ಸಂದೇಶ ಹೇಗೆ ತಲಪಿಸಬೇಕೆಂದು. ನಾವು ಅವರ ಆಧ್ಯಾತ್ಮಿಕ ಪದವಿ ಉನ್ನತಗೊಳ್ಳಲು ಪ್ರಾರ್ಥಿಸಬೇಕಲ್ಲದೆ ಚೈನಾ ದೇಶದಲ್ಲೂ ಲೋಕದ ಪ್ರತಿಯೊಂದು ದೇಶದಲ್ಲಿಯೂ ಅಹ್ಮದಿಯ್ಯತ್ ಮತ್ತು ನೈಜ ಇಸ್ಲಾಮ್ ಹಬ್ಬಲಿ ಎಂದು ಬಹಳ ಪ್ರಾರ್ಥಿಸಬೇಕು. ಅಲ್ಲಾಹನು ಹಾಗೆ ಮಾಡುವ ಭಾಗ್ಯ ನಮಗೆ ದಯಪಾಲಿಸಲಿ – ಆಮೀನ್.

—————————*****—————————


***Friday Sermon delivered by Hadrath Khaleefatul Masih Al Khamis*** *(atba)*

*At,Masjid Mubarak, Islamabad, UK. On 24-05-2019.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email****: khutuba.kannada@gmail.com*



**You can find all the Sermons archived at**: www.alislam.org/friday-sermon